# ಚುಟುಕು ಕ್ರಿಕೆಟ್‌ನ ಸಿಕ್ಸರ್ 'ಪೂರ್ಣ'ಚಂದಿರ




**ವೆಸ್ಟ್‌ಇಂಡೀಸ್ ತಂಡದ ಎಡಗೈ ಬ್ಯಾಟರ್ ನಿಕೊಲಸ್ ಪೂರನ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ ಒಂದೊಂದೇ ದಾಖಲೆಯನ್ನು ಉತ್ತಮಪಡಿಸುತ್ತಾ ಸಾಗಿದ್ದಾರೆ. ಈ ಋತುವಿನ ನಡುಘಟ್ಟದ ಹೊತ್ತಿಗೇ ಅವರು 31 ಸಿಕ್ಸರ್‌ಗಳನ್ನು ಚಚ್ಚಿದ್ದಾರೆ.**

■ ವಿಶಾಖ ಎನ್.

ನಾಯಕ ರಿಷಭ್ ಪಂತ್ ತಡಬಡಾಯಿಸುತ್ತಿರುವ ಹೊತ್ತಿದು. ಆದರೆ, ಅವರು ಕನಸಿನ ನೀರೆರೆಯುತ್ತಿರುವ ಲಖನೌ ಸೂಪರ್‌ಜೈಂಟ್ಸ್ ತಂಡಕ್ಕೆ ಇಂಧನವಾಗಿ ಇರುವವರು ನಿಕೊಲಸ್ ಪೂರನ್. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ನ 2025ರ ಋತುವಿನಲ್ಲಿ ಸ್ಫೋಟಕ ಬ್ಯಾಟಿಂಗ್ ಪ್ರಮಾಣವು ದೊಡ್ಡ ಮಟ್ಟಕ್ಕೆ ಜಿಗಿದಿದೆ.

ಕಳೆದ ಋತುವಿನ ಆಟಕ್ಕೆ ಹೋಲಿಕೆ ಮಾಡಿದಲ್ಲಿ, ಈ ಬಾರಿ ಮೂರನೇ ಕ್ರಮಾಂಕದ ಬ್ಯಾಟರ್‌ಗಳಾದ ಶ್ರೇಯಸ್ ಅಯ್ಯರ್ ಹಾಗೂ ಪೂರನ್ ಸುಮಾರು 70ರ ರನ್ ಸರಾಸರಿಯಲ್ಲಿ ರನ್‌ಗಳನ್ನು ಹೆಕ್ಕಿಕೊಡುತ್ತಿದ್ದಾರೆ. ಇಬ್ಬರ ಸ್ಟ್ರೈಕ್‌ರೇಟ್ ಸೇರಿಸಿ ನೋಡಿದರೆ, ಟೂರ್ನಿಯ ನಡುಘಟ್ಟದ ಹೊತ್ತಿನಲ್ಲಿ 170 ದಾಟುತ್ತದೆ. ಏಪ್ರಿಲ್ 13ರವರೆಗೆ ನಡೆದ ಪಂದ್ಯಗಳಲ್ಲಿ 'ಆರೆಂಜ್ ಕ್ಯಾಪ್' ನಿಕೊಲಸ್ ಪೂರನ್ ಅವರ ತಲೆಯ ಮೇಲೆಯೇ ಇದೆ. ಈ ಋತುವಿನಲ್ಲಿ ಮೊದಲ ಅರ್ಧದಷ್ಟು ಹೊತ್ತಿಗೇ 26 ಬೌಂಡರಿಗಳನ್ನು ಹೊಡೆದಿದ್ದಾರೆ. ಅದಕ್ಕೂ ಮಿಗಿಲಾಗಿ 31 ಸಿಕ್ಸರ್‌ಗಳು ಅವರ ಬ್ಯಾಟ್‌ನಿಂದ ಬಂದಿವೆ. ಗರಿಷ್ಠ 215.43ರಷ್ಟು ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್‌ಗಳಿಸಿದ ಉದಾಹರಣೆಯೂ ಇದೆ.

2025ರಲ್ಲಿ ಮೊದಲ ಪಂದ್ಯದಿಂದಲೇ ಪೂರನ್ ಫಾರ್ಮ್‌ನಲ್ಲಿ ಇದ್ದಾರೆ. ಮುಂಬೈ ಇಂಡಿಯನ್ಸ್ ಎದುರಿನ ಒಂದು ಪಂದ್ಯದಲ್ಲಿ ಮಾತ್ರ ಅವರು 12 ರನ್‌ಗಳನ್ನು ಗಳಿಸಿ ಔಟಾದರು. ಲಖನೌದಲ್ಲಿ ಇರುವ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಗುಜರಾತ್ ಟೈಟನ್ಸ್ ಆರು ವಿಕೆಟ್‌ಗಳಿಂದ ಗೆಲುವು ಸಾಧಿಸಿತು. ಆ ಪಂದ್ಯದಲ್ಲಿ ಕೇವಲ 34 ಎಸೆತಗಳಲ್ಲಿ 61 ರನ್‌ಗಳ ಕಾಣ್ಕೆಯನ್ನು ಪೂರನ್ ನೀಡಿದರು. ಆ ಇನಿಂಗ್ಸ್‌ನಲ್ಲಿ ಇದ್ದುದು ಒಂದೇ ಒಂದು ಬೌಂಡರಿ. ಆದರೆ, ಏಳು ಸಿಕ್ಸರ್‌ಗಳನ್ನು ಹೊಡೆದದ್ದು ಚುಟುಕು ಕ್ರಿಕೆಟ್‌ನಲ್ಲಿ ಅವರು ಕೊಡುತ್ತಿರುವ 'ಸ್ಟೇಟ್‌ಮೆಂಟ್' ಯಾವ ಬಗೆಯದ್ದು ಎನ್ನುವುದನ್ನು ಸಾರುತ್ತದೆ.

ಈ ವರ್ಷ ಪೂರನ್ ಐಪಿಎಲ್‌ಗೂ ಮೊದಲು ವಾರ್ಮ್–ಅಪ್ ಆಗಿ ಬಂದದ್ದು ಅಬುಧಾಬಿಯಲ್ಲಿ ನಡೆದ ಇಂಟರ್‌ನ್ಯಾಷನಲ್ ಲೀಗ್ ಟಿ20 ಟೂರ್ನಿಯಿಂದ. ಅಲ್ಲಿ ತಾವು ಆಡಿದ ಕೊನೆಯ ಎರಡು ಇನಿಂಗ್ಸ್‌ಗಳಲ್ಲಿ ಕ್ರಮವಾಗಿ 58 ಹಾಗೂ 48 ರನ್‌ಗಳನ್ನು ಔಟಾಗದೆ ಅವರು ಖಾತೆಗೆ ಹಾಕಿಕೊಂಡು ಬಂದಿದ್ದರು. ಡೆಲ್ಲಿ ಕ್ಯಾಪಿಟಲ್ಸ್ ತಂಡದ ವಿರುದ್ಧ ನಡೆದ ಮೊದಲ ಪಂದ್ಯದಲ್ಲಿ 75 ರನ್ ಹೊಡೆಯುವ ಮೂಲಕ ಪೂರನ್ ತಮ್ಮ ಭುಜಗಳು ತುಸುವೂ ದಣಿದಿಲ್ಲ ಎನ್ನುವುದನ್ನು